


ತ.ರಾಸು., ಟಿ.ಪಿ. ಕೈಲಾಸಂ ಮೊದಲಾದವರ ಕುರಿತಾದ ಪುಸ್ತಕಗಳೂ ಸೇರಿದಂತೆ ನೂರಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳಿಗಾಗಿ ಹಲವಾರು ಕೃತಿಗಳ ಮಾಲಿಕೆಯ ಸಂಪಾದಕರಾಗಿದ್ದರು. ಉಡುಪಿಯಲ್ಲಿ ನಡೆದ 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಪುಸ್ತಕ ಪ್ರಾಧಿಕಾರದ ಮೊದಲ ಅಧ್ಯಕ್ಷ, ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ, ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯದರ್ಶಿ, ಹೀಗೆ ಹಲವು ಸಾರ್ವಜನಿಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ಅವನ್ನೆಲ್ಲಾ ಗಮನಿಸಿದಾಗ ತಮ್ಮ ಜೀವಮಾನದಲ್ಲಿ ವ್ಯಕ್ತಿಯೊಬ್ಬರು ಇಷ್ಟೆಲ್ಲಾ ಸಾಧಿಸಲು ಹೇಗೆ ಸಾಧ್ಯ ಎಂಬ ಆಶ್ಚರ್ಯ ತನ್ನಿಂದ ತಾನೇ ಉಂಟಾಗುತ್ತದೆ.

ಎಂತಹ ಶ್ರೇಷ್ಠ ಲೇಖಕನೇ ಆಗಲಿ, ತನ್ನ ಯುಗದ ಪ್ರಭಾವವನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಲಾರ. ಅವನನ್ನು ಅವನ ಕಾಲದ ಸಂದರ್ಭದಲ್ಲಿ ನೋಡಬೇಕು. ಅನಂತರ ಅವನ ಸೃಷ್ಟಿಯಲ್ಲಿ ಸಾರ್ವಕಾಲಿಕವಾದದ್ದೇನು ಎಂದು ವಿಶ್ಲೇಷಿಸಬೇಕು, ಎಂಬ ವಿಚಾರದಿಂದ ಅವರ 'ವಿಲಿಯಂ ಶೇಕ್ಸ್‌ಪಿಯರ್' ಕೃತಿ ಪ್ರಾರಂಭವಾಗುತ್ತದೆ. ತಾತ್ವಿಕವಾಗಿ ಅವರ ವಿಮರ್ಶೆ ಈ ನಿಲುವನ್ನು ಎಲ್ಲಾ ಕಡೆ ಅನ್ವಯಿಸಿಕೊಂಡಿದೆ. ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ 'ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ' ಮಾಲೆಯಲ್ಲಿ ಅವರು ಬರೆದ ಸಂಪುಟ 'ಹೊಸಗನ್ನಡ ಸಾಹಿತ್ಯ' ಅವರ ಈ ನಿಲುವಿಗೆ ಇನ್ನೂ ಉತ್ತಮ ಸಾಕ್ಷ್ಯ ನೀಡುತ್ತದೆ. ಅವರ ನಿರಂತರವಾದ ಸಮಕಾಲೀನ ಓದಿಗೂ ಆ ಕೃತಿ ಉತ್ತಮ ಉದಾಹರಣೆ. ವಿಮರ್ಶಕನೊಬ್ಬನಿಗೆ ಅತಿ ಮಹತ್ವದ ಕೃತಿಗಳ ಅಧ್ಯಯನದ ಆಸಕ್ತಿ ಅನಿವಾರ್ಯವಾಗಿ ಹೆಚ್ಚಾಗುತ್ತಾ ಹೋಗುತ್ತದೆ. ಅಂತಹ ಸಂದರ್ಭದಲ್ಲಿ ಸತತವಾಗಿ ಸಮಕಾಲೀನ ಸಾಹಿತ್ಯವನ್ನು ಓದುತ್ತಾ ಅವುಗಳ ಬಗ್ಗೆ ಸಮಂಜಸ ತಿಳಿವಳಿಕೆ ಹೊಂದುವುದು ಸುಲಭದ ವಿಚಾರವಲ್ಲ.

ಲಕ್ಷ್ಮೇಶ್ವರ ಸ್ವಾಮಿರಾವ್ ಶೇಷಗಿರಿರಾವ್ ಅವರು ನವೋದಯ ಸಾಹಿತ್ಯದ ಜೊತೆ ಬೆಳೆಯುತ್ತಾ ಪ್ರಗತಿಶೀಲರನ್ನು ಅರಿತವರು. ನವ್ಯ ಸಾಹಿತ್ಯ ಚಳವಳಿ ಕಾಲದಲ್ಲೂ ತಮ್ಮ ವಿಮರ್ಶೆಯನ್ನು ಸತತವಾಗಿ ಬರೆಯುತ್ತಾ ಬಂದವರು. ಆದರೆ ಅವರು ಯಾವುದೇ ಸಾಹಿತ್ಯ ಚಳವಳಿಯ ತಾತ್ವಿಕತೆಗೆ ತಮ್ಮನ್ನು ಸಂಪೂರ್ಣ ತೆತ್ತುಕೊಂಡವರಲ್ಲ. ನವೋದಯದ